# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ

## ಸಿ.ಸಿ ಸಂಖ್ಯೆ:03/2022

| | |
|---|---|
| ಹೆಸರು | :ಚೆನ್ನಕೇಶವ |
| ತಂದೆಯ ಹೆಸರು | :ಪದ್ಮಯ್ಯ ಗೌಡ |
| ಪ್ರಾಯ | :42 ವರ್ಷ |
| ಉದ್ಯೋಗ | :ಕೃಷಿ |
| ವಾಸ | :ಮರ್ಕಂಜ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 20.05.2024 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ದಿಃ 29.08.2011 ರಂದು ಸುಳ್ಯ ಪೊಲೀಸರು ಪಂಚನಾಮೆಗಾಗಿ ನನ್ನನ್ನು ಸುಳ್ಯ ಪೊಲೀಸ್ ಠಾಣೆಗೆ ಬರುವಂತೆ ತಿಳಿಸಿದ್ದರು. ಅದರಂತೆ ನಾನು ಬೆಳಿಗ್ಗೆ 9 ಗಂಟೆಗೆ ಸುಳ್ಯ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಪೊಲೀಸ್ ಠಾಣೆಯಲ್ಲಿ ಚಾಸಾ-41 ಪ್ರವೀಣ್ ನೀಲಂನವರ್ ಎಂಬ ಪೊಲೀಸರು ಇದ್ದರು. ಚಾಸಾ-15 ಸುಂದರ ಪೂಜಾರಿ, ಚಾಸಾ-19 ಬಾಲಚಂದ್ರರವರು ಸಹ ಇದ್ದರು. ಪೊಲೀಸ್ ಠಾಣೆಯಲ್ಲಿ ಚಾಸಾ-15 ಸುಂದರ ಪೂಜಾರಿಯವರು ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳ ಬಗ್ಗೆ ನಮೂದಾಗಿರುವ 7-8 ಲಾಂಗ್ ಪುಸ್ತಕಗಳನ್ನು ಹಾಜರು ಪಡಿಸಿದ್ದು, ಸದರಿ ಪುಸ್ತಕಗಳನ್ನು ಪೊಲೀಸರು ಅಮಾನತು ಪಡಿಸಿಕೊಂಡು ಆ ಬಗ್ಗೆ ಬರವಣಿಗೆ ಮಾಡಿರುತ್ತಾರೆ. ಸದರಿ ಬರವಣಿಗೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ನಿಪಿ-4 ಎಂದು ಗುರುತಿಸಲಾಯಿತು ಸದರಿ

ಸಹಿಗಳನ್ನು ನಿಪಿ-4 (ಎ) ರಿಂದ 4(ಈ) ಎಂದು ಗುರುತಿಸಲಾಯಿತು. ಆ ದಿನ ಚಾಸಾ-15 ಸುಂದರ ಪೂಜಾರಿಯವರು ಪೊಲೀಸರ ಮುಂದೆ ಹಾಜರು ಪಡಿಸಿದ ಲಾಂಗ್ ಪುಸ್ತಕಗಳನ್ನು ಈಗ ನ್ಯಾಯಾಲಯದ ಮುಂದೆ ನೋಡಿದರೆ ಗುರುತಿಸುತ್ತೇನೆ. (ಅವುಗಳನ್ನು ಈಗಾಗಲೇ ಪ್ರಕರಣ ಸಂಖ್ಯೆ ಸಿ.ಸಿ.348/2015 ರಲ್ಲಿ ನಿಪಿ-4, 8, 9, 10, 11 ರಿಂದ 14 ಮತ್ತು 22 ಎಂದು ಗುರುತಿಸಲಾಗಿದೆ. )

<u>**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**</u>

ನಾನು 9 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಆ ದಿನ ಸುಂದರ ಪೂಜಾರಿಯವರು ಹಾಜರು ಪಡಿಸಿದ ಪುಸ್ತಕಗಳು ಆಶ್ರಯ ಯೋಜನೆಗೆ ಸಂಬಂಧಪಟ್ಟ ಪುಸ್ತಕಗಳು. ನನಗೆ ಮತ್ತು ಶಿವರಾಮ್ ಎಂಬುವವರಿಗೆ ಕ್ರಿಮಿನಲ್ ಪ್ರಕರಣ ಇದ್ದವು ಎಂದರೆ ಸರಿ. ನನಗೆ ಮತ್ತು ಶಿವರಾಮ್ ಎಂಬುವವರಿಗೆ ತುಂಬಾ ವರ್ಷಗಳಿಂದ ಸರಿ ಇಲ್ಲ ಎಂದರೆ ಸರಿ. ನಾನು ಮತ್ತು ಶಾಸ್ತ್ರಿಗಳು ಆರೋಪಿತರ ವಿರುದ್ದ ಭ್ರಷ್ಟಾಚಾರ ಸಮಿತಿ ರಚಿಸಿ ಹೋರಾಟ ಮಾಡಿದ್ದೆವು ಎಂದರೆ ಸರಿ. ನಾನು ಪಂಚಾಯಿತಿಯಲ್ಲಿ ಸದಸ್ಯನಾಗಿರಲಿಲ್ಲ. ಶಿವರಾಮ ಮತ್ತು ಚಂದ್ರಕಲಾರವರು ಬಿ.ಜೆ.ಪಿ ಕಾರ್ಯಕರ್ತರು ಎಂದರೆ ಸರಿ. ನಾನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತ ಎಂದರೆ ಸರಿ.

ಪೊಲೀಸರು ನನ್ನನ್ನು ಠಾಣೆಗೆ ಬರುವಂತೆ ಹೇಳಿರುತ್ತಾರೆ. ಆ ದಿನ ಚಾಸಾ-41 ರವರು ನನ್ನ ಸಹಿ ಪಡೆದುಕೊಂಡಿರುತ್ತಾರೆ. ನಾನು ಶಿವರಾಮ್ ರವರ ಮೆಲಿನ ರಾಜಕೀಯ ದ್ವೇಷದಿಂದ ಸುಳ್ಳು ಪ್ರಕರಣ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಆ ರೀತಿ ಸೃಷ್ಟಿ ಮಾಡಿ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಪಂಚನಾಮೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಂದೆ ಸುಂದರ ಪೂಜಾರಿಯವರು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>2 ಮತ್ತು 3ನೇ ಆರೋಪಿತರ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ.</u>

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಸುಳ್ಯ